ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**: (318)249**
ಮಾನ್ಯ ಸದಸ್ಯರ ಹೆಸರು	**: ಶ್ರೀ ರಾಮಸ್ವಾಮಿ ಗೌಡ.ಬಿ.ಬಿ**
	: (ಶ್ರೀ ಜಿ.ಜನಾರ್ಧನರೆಡ್ಡಿ)
ಉತ್ತರಿಸುವ ಸಚಿವರು	**: ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು**

ಅ) ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ ಪ್ರವಾಸೋದ್ಯಮ ಕೇಂದ್ರಗಳನ್ನಾಗಿ ಗುರುತಿಸಿರುವ ಸ್ಥಳಗಳಾವುವು; ಅವುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಕುಣಿಗಲ್ ತಾಲ್ಲೂಕಿನಲ್ಲಿ ಯಡಿಯೂರು ಹಾಗೂ ಮಾಕೋ೯ನ ಹಳ್ಳಿ ಜಲಾಶಯಗಳನ್ನು ಪ್ರವಾಸಿ ಕ್ಷೇತ್ರಗಳೆಂದು ಗುರುತಿಸಲಾಗಿದೆ.
ಯಡಿಯೂರಿನಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ನಿರ್ಮಿಸಲಾಗಿದೆ.

ಯಡಿಯೂರಿನ ಬಳಿ ರಸ್ತೆ ಬದಿ ಸೌಲಭ್ಯವನ್ನು ನಿರ್ಮಿಸಲಾಗಿದ್ದು ಪ್ರಸ್ತುತ ಖಾಸಗೀಕರಣಗೊಳಿಸಿ ನಡೆಸಲಾಗುತ್ತಿದೆ.

ಆ) ಈವರೆವಿಗೂ ಯಾವುದೇ ಸ್ಥಳಗಳನ್ನು ಗುರುತಿಸದಿದ್ದಲ್ಲಿ, ಸ್ಥಳಗಳನ್ನು ಗುರುತಿಸಿ ಅಭಿವೃದ್ಧಿ ಪಡಿಸಲು ಸರ್ಕಾರ ಕ್ರಮಗಳನ್ನು ಕೈಗೊಳ್ಳುವುದೇ?

2008–09ನೇ ಸಾಲಿನಲ್ಲಿ ಯಡಿಯೂರಿನಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಯಾತ್ರಿನಿವಾಸವನ್ನು ರೂ.200.00ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದು ಇದಕ್ಕಾಗಿ ಈ ಸಾಲಿನ ಅನುದಾನದಲ್ಲಿ ರೂ.50.00ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**: (320)250**
ಸದಸ್ಯರ ಹೆಸರು	**: ಸಿ.ಟಿ. ರವಿ [ಚಿಕ್ಕಮಗಳೂರು]**
ಉತ್ತರಿಸುವ ಸಚಿವರು	**: (ಶ್ರೀ ಕಟ್ಟಾಸುಬ್ರಮಣ್ಯ ನಾಯ್ಡು) ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು**

ಅ ಐಟಿ ಬಿಟಿ ಕಂಪನಿಗಳಿಂದ ಬೆಂಗಳೂರು ನಗರಕ್ಕೆ ಆಗುವ ದುಷ್ಪರಿಣಾಮಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ

ಆ ಐಟಿ ಬಿಟಿ ಕಂಪನಿಗಳಿಂದ ಆಗುವ ಅನಾಹುತಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಅನ್ವಯಿಸುವುದಿಲ್ಲ

ಇ ಇತ್ತೀಚಿನ ದಿನಗಳಲ್ಲಿ ಕಂಪ್ಯೂಟರ್‌ಗಳು ಪರಿಸರದ ಮೇಲೆ ಬಹಳಷ್ಟು ದುಷ್ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದರೆ ತೆಗೆದುಕೊಂಡಿರುವ ಕ್ರಮಗಳೇನು;

ಇಲ್ಲ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (129)251
2. ಸದಸ್ಯರ ಹೆಸರು : ಶ್ರೀ. ಆರ್. ರೋಷನ್ ಬೇಗ್, ಶಿವಾಜಿನಗರ.
3. ಉತ್ತರಿಸುವ ಸಚಿವರು : (ಶ್ರೀ.ಜೆ.ಕೃಷ್ಣಪಾಲೀಮಾರ್)
: ಮಾನ್ಯ ಪರಿಸರ, ಜೀವಿಶಾಸ್ತ್ರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಅ) ಬೆಂಗಳೂರು ನಗರದಲ್ಲಿರುವ ಕೆರೆಗಳು ಮಾಲಿನ್ಯವಾಗುತ್ತಿರುವ (Polluted) ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ.

ಹೌದು

ಆ) ಕೆರೆಗಳ ಸುತ್ತಮುತ್ತಲಿನಲ್ಲಿರುವ ಅಪಾರ್ಟ್‌ಮೆಂಟ್‌ಗಳಿಂದ ಹಾಗೂ ಅಲ್ಲಿ ಕಟ್ಟಡಗಳು ತಲೆಯೆತ್ತುತ್ತಿರುವುದರಿಂದ ಕೆರೆಗಳು ಮಾಲಿನ್ಯವಾಗುತ್ತಿರುವುದರ ಬಗ್ಗೆ ಸರ್ಕಾರದ ಮುಂದಿರುವ ಕ್ರಮವೇನು (ವಿವರ ನೀಡುವುದು).

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆ.ಎಸ್.ಪಿ.ಸಿ.ಬಿ) ಕಟ್ಟಡ ಕಾಮಗಾರಿ ಯೋಜನೆಗಳಿಗೆ ಸಮ್ಮತಿ ನೀಡುವ ಮುನ್ನ ಬಿ.ಡಿ.ಎ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರ ಅಭಿಪ್ರಾಯವನ್ನು ಪಡೆಯುವುದರ ಜೊತೆಗೆ ಕೆಳಕಂಡಂತೆ ಮಾರ್ಗಸೂಚಿಯನ್ನು ಅನುಸರಿಸಿ ನಿರ್ಮಾಣ ಕಾಮಗಾರಿಗಳಿಗೆ ಸಮ್ಮತಿ ಪತ್ರ ನೀಡುತ್ತದೆ.
ಒಳಚರಂಡಿ ವ್ಯವಸ್ಥೆ ಇದ್ದಲ್ಲಿ ಕಟ್ಟಡಗಳ ಕೊಳಚೆ ನೀರನ್ನು ಅದಕ್ಕೆ ಬಿಡಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸಹಮತಿಯಂತೆ ಅನುಮತಿಸಲಾಗುತ್ತಿದೆ. ಇಲ್ಲದ ಪಕ್ಷದಲ್ಲಿ ಕಟ್ಟಡಕ್ಕೆ ಪ್ರತ್ಯೇಕ ಶುದ್ಧೀಕರಣ ಘಟಕ ಅಳವಡಿಸಿ ಶುದ್ಧೀಕರಿಸಿದ ಕೊಳಚೆ ನೀರನ್ನು ಪುನರ್ ಬಳಸುವಂತೆ ಕಡ್ಡಾಯಮಾಡಲಾಗಿದೆ.

ಕಟ್ಟಡಗಳಿಂದ ನೇರವಾಗಿ ಕೆರೆಗಳಿಗೆ ಕೊಳಚೆ ನೀರು ಸೇರುತ್ತಿದ್ದರೆ ಅಂತಹ ಕಟ್ಟಡ ಮಾಲೀಕರ ವಿರುದ್ಧ ಜಲ (ಮಾಲಿನ್ಯ ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ, 1974ರ ಅಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗುತ್ತದೆ.